**ದಿಃ18.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀಮತಿ ಎಸ ಎಸ ಪವಾರವರಿಂದ.**

ನಾನು ನ್ಯಾಯಾಲಯಕ್ಕೆ ಹಾಜರಾದ ಮೇಲೆ ಕೈಪಿಯತ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಹಾಕಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ಪರವಾಗಿ ಮುಖ್ಯವಾದ ಕೈಪಿಯತ್ತ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ 10 ರಿಂದ 12 ರವರು ಹಾಕಿದಂತಹ ಕೈಪಿಯತ್ತನ್ನು adopt ಮಾಡಿಕೊಂಡಿದ್ದು ನಂತರ amended Written statement ಹಾಕಿರುತ್ತೇವೆ ಎನ್ನುತ್ತಾರೆ. ಪ್ರತಿವಾದಿ 10 ರಿಂದ 12 ರವರು ಹಾಕಿರುವಂತಹ ಕೈಪಿಯತ್ತನ್ನು ಓದಿದ್ದೀರಾ ಎಂದರೆ ಸಾಕ್ಷಿ ಓದಿದ್ದೇನೆ ಎನ್ನುತ್ತಾರೆ. power of attorney ಪ್ರಕಾರ ನಾನು ಆಸ್ತಿ ತೆಗೆದುಕೊಂಡಿದ್ದೇನೆಂದು ಹೇಳಿದ್ದು ಅದರಲ್ಲಿ ಯಾರ–ಯಾರ ಸಹಿ ಇತ್ತು ಎಂದರೆ ಸಾಕ್ಷಿ



ಬೆನಕಟ್ಟಿ ಪರವಾರದ 9 ಸದಸ್ಯರು ಅಂದರೆ ಜ್ಯೋತಿಬಾ, ಮಲ್ಲಪ್ಪ, ಮಾರುತಿ, ಮೈನವ್ವ, ಪಾರ್ವತಿ, ಕೃಷ್ಣಪ್ಪಾ, ಇನ್ನಿಬ್ಬರು ಅಂದರೆ ರಾಮಪ್ಪ ಒಟ್ಟು 9 ಜನ ಸಹಿ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ರಟ್ಟಿಹಳ್ಳಿ ವಕೀಲರು ಕೂಡಾ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ power of attorney ಯನ್ನು ಖುದ್ದಾಗಿ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿರುತ್ತೇನೆ ಎನ್ನುತ್ತಾರೆ. ಸೇಲ್ ಡಿಡ್ ಮಾಡಿಕೊಳ್ಳುವ ಮುಂಚೆ ಏಲ್ಲಿ–ಏಲ್ಲಿ negotiation ಆಗಿದೆ ಎಂದು ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿ ರಟ್ಟಿಹಳ್ಳಿ ಇವರ ಕಚೇರಿಯಲ್ಲಿ ನಾನು, ನನ್ನ ಹೆಂಡತಿ ಹಾಗೂ ಪ್ರತಿವಾದಿ ನಂಬರ 10 ರಿಂದ 12 ಮತ್ತು ಶ್ಯಾಮೋಜಿ ಎನ್ನುವವರು ಒಬ್ಬರು ಎನ್ನುತ್ತಾರೆ. ನೀವು ಈ ಸಂಬಂಧ ವಕೀಲರಿಗೆ ವಿಚಾರಣೆ ಮಾಡಿದೀರಿ ಮತ್ತು ಆ ಆಸ್ತಿ ಕುರಿತು ಯಾವುದಾದರೂ ದಾವಾ ಇದೆ ಎಂದು ವಿಚಾರಣೆ ಮಾಡಿದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ರಟ್ಟಿಹಳ್ಳಿ ವಕೀಲರಿಗೆ ನೀವೇನಾದರೂ ಈ ದಾವಾ

ಆಸ್ತಿ ಸಂಬಂಧ ಮಾರಾಟ ಏನಾದರೂ ಆಗಿದೇಯಾ ಎಂಬುವುದನ್ನು ಕೇಳಿಕೊಂಡಿರಾ ಎಂದರೆ ಸಾಕ್ಷಿ ಕೇಳಿಕೊಂಡಿದ್ದೇನೆ ಎನ್ನುತ್ತಾರೆ. ಸದರಿ ಆಸ್ತಿಯು ಆಗ್ರಿಮೆಂಟ ಆಫ ಸೇಲ್ ಆಗಿದ್ದರು ಕೂಡಾ ಹಾಗೂ ವ್ಯಾಜ್ಯ ಇದೆ ಎಂಬುವುದು ತಿಳಿಸಿದ್ದರು ಕೂಡಾ ನಾನು ಕಡಿಮೆ ಬೆಲೆಗೆ ಸಿಗುತ್ತದೆ ಎಂಬ ಕಾರಣಕ್ಕೆ ಅದನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತೇನೆಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ನನಗೆ ಎಲ್ಲ ಸಂಗತಿಗಳು ಗೊತ್ತಿದ್ದರು ಸಹ ವಾದಿಯರಿಗೆ  ಆಗ್ರಿಮೆಂಟ ಆಫ ಸೇಲ್ ಆಗಿದೆ ಎಂಬುವುದು ಗೊತ್ತಿದ್ದರು ಕೂಡಾ ಅವರಿಗೆ ವಂಚನೆ ಮಾಡಬೇಕೆಂಬ ಉದ್ದೇಶದಿಂದ ಕ್ರಯ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಕ್ರಯಕ್ಕೆ ತೆಗೆದುಕೊಂಡಾಗಲೆ ಸದರಿ ಆಸ್ತಿ ಕೃಷಿ ಭೂಮಿ ಆಗಿತ್ತು ಎಂದರೆ ಸರಿ. ವಾದಿಯರು ಪ್ರತಿವಾದಿ ನಂಬರ 1 ರಿಂದ 9 ರವರಿಗೆ ಬಂದು ಕ್ರಯ ಪತ್ರ ಮಾಡಿಕೊಡುವಂತೆ ನೋಟೀಸ ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಆಗ ಗೊತ್ತಿರಲಿಲ್ಲ ಈಗ ಕಡತ ನೋಡಿದ ಮೇಲೆ ಆ ವಿಷಯ ಗೊತ್ತಾಗಿದೆ ಎನ್ನುತ್ತಾರೆ. ಆ ನೋಟೀಸಗೆ  ಪ್ರತಿವಾದಿ ನಂಬರ 1 ರಿಂದ 9 ರವರು ತಮ್ಮ ವಕೀಲರ ಮುಖಾಂತರ ಉತ್ತರ ಕೊಟ್ಟಿರುತ್ತಾರೆಂದರೆ ರೆಕಾರ್ಡ ನೋಡಿದ ನಂತರ ನನಗೆ ಗೊತ್ತಾಗಿದೆ ಎನ್ನುತ್ತಾರೆ. ನಾನು business ಮಾಡುತ್ತೇನೆ ಎಂದರೆ ಸಾಕ್ಷಿ ವ್ಯವಸಾಯ ಹಾಗೂ business ಎರಡನ್ನು ಮಾಡುತ್ತೇನೆ ಎನ್ನುತ್ತಾರೆ. ವಾದಿಯರು ನೋಟಿಸ ನೀಡಿದ ನಂತರ ಪ್ರತಿವಾದಿ ನಂಬರ 1 ರಿಂದ 9 ರವರು ಯಾಕೆ ಮಾರಾಟ ಮಾಡಿಲ್ಲವೆಂದು ಸರಿಯಾಗಿ ತಿಳಿಸಿಲ್ಲವೆಂದರೆ ಸಾಕ್ಷಿ ನನಗೆ ಸಂಬಂಧ ಇಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ 1 ರಿಂದ 9 ರವರು ವಾದಿಯರಿಗೆ ಮೋಸ ಮಾಡುವ ದೃಷ್ಟಿಯಿಂದ ಪ್ರತಿವಾದಿ 10 ರಿಂದ 12 ರವರು ನನಗೆ ಮಾರಾಟ ಮಾಡುವಾಗ ಮುಚ್ಚಿಟ್ಟಿದ್ದಾರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ವಾದಿಯರು ಸದರಿ ಆಗ್ರಿಮೆಂಟ ಆಪ ಸೇಲ್

ಆದ ನಂತರ ಪ್ರತಿವಾದಿ ನಂಬರ 1 ರಿಂದ 9 ರವರಿಗೆ ಸಾಕಷ್ಟು ಹಣ ಸಹಾಯವನ್ನು litigation ಸಂಬಂಧ ನೀಡುತ್ತಾ ಬಂದಿರುತ್ತಾರೆಂದರೆ ಸಾಕ್ಷಿ ಅದು ಸುಳ್ಳು ಏಕೆಂದರೆ  ಆಗ್ರಿಮೆಂಟ ಆಪ ಸೇಲ್ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರತಿವಾದಿಯರು ಸಲ್ಲಿಸಿದ ಕೈಪಿಯತ್ತನ್ನು ನಾನು ಓದಿದ್ದೇನೆಂದು ಹೇಳಿದ್ದು ಸದರಿಯವರು ಸೇಲ್ ಡಿಡ್ ಬಗ್ಗೆ ಎನು ಹೇಳಿರುತ್ತಾರೆಂದು ಹೇಳುತ್ತೀರಾ ಎಂದರೆ ಸಾಕ್ಷಿ ವಾದಿಯರು ಹೇಳಿದ ಎಲ್ಲ ಅಂಶಗಳನ್ನು ಅಲ್ಲಗಳೆದು ತಮ್ಮ ಖರೀದಿ ಕಾನೂನು ಪ್ರಕಾರ ಇದೆ ಎಂದು ಮತ್ತು ಖರೀದಿ ಆದ ನಂತರ ಜಮೀನಿನಲ್ಲಿ ಆದ ಬದಲಾವಣೆಗಳು ಹಾಗೂ ಸದರಿ ಜಮೀನಿನ ನಾಲ್ಕು certified sale deed ಗಳು ಹಾಗೂ ಆದ ಬದಲಾವಣೆಯ ರೆಕಾರ್ಡ್ಸಗಳು ನಮ್ಮ ಖರೀದಿಯು ಕಾನೂನು ಬದ್ದವಾಗಿದ್ದು ವಾದಿಯರು ಮಾಡಿದ ದಾವೆಯಲ್ಲಿ ಪ್ರತಿವಾದಿ ನಂಬರ 1 ರಿಂದ 9 ರವರಿಗೆ ಅಷ್ಟೆ ಸಂಬಂಧಪಟ್ಟಿದ್ದು ನಮಗೆ ದಾವಾ ಸಂಬಂಧ ಇಲ್ಲ ಎಂದು ಹಾಕಿರುತ್ತಾರೆಂದು ಸಾಕ್ಷಿ

ನುಡಿಯುತ್ತಾರೆ. ಪ್ರತಿವಾದಿ ನಂಬರ 10 ಮತ್ತು 12 ರವರು ಸಲ್ಲಿಸಿರುವ ಕೈಪಿಯತ್ತನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ನಾಲ್ಕು ಸೇಲ್ ಡಿಡ್ ಗಳ ಬಗ್ಗೆ ಎಲ್ಲಿ ಹೇಳಿರುತ್ತಾರೆ ತೋರಿಸಿ ಎಂದರೆ ಸಾಕ್ಷಿ ಕೈಪಿಯತ್ತನ ಜೊತೆ ಸಲ್ಲಿಸಿರುವ ದಾಖಲೆಗಳ ಪಟ್ಟಿಯಲ್ಲಿ ಕಾಣಿಸಿರುತ್ತಾರೆ ಎನ್ನುತ್ತಾರೆ. ಸಾಕ್ಷಿ ಸದರಿ ಕೈಪಿಯತ್ತನ್ನು ನೋಡಿ ಅದರಲ್ಲಿ ಪುಟ ಸಂಖ್ಯೆ 3 ಖಂಡಿಕೆ 8 ರಲ್ಲಿ ಇದೆ ಎನ್ನುತ್ತಾರೆ.

ಸದರಿ ಕೇಸನ್ನು ದಾಖಲಿಸಿದ ನಂತರ ವಾದಿಯರು ಆಸ್ತಿಯನ್ನು ಯಾರಿಗೂ ಮಾರಾಟ ಮಾಡಬಾರದು ಎಂದು ತಡಯಾಜ್ಞೆ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ತಡಯಾಜ್ಞೆ ವಿರುದ್ಧ ವಾದಿಯರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ writ ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ತಡಯಾಜ್ಞೆ ಮಾನ್ಯ ಉಚ್ಚ ನ್ಯಾಯಾಲಯವು ಆಸ್ತಿ ಕುರಿತು ಏನಾದರೂ ಬದಲಾವಣೆ ಮಾಡಿದ್ದಲ್ಲಿ ಅದನ್ನು ನ್ಯಾಯಾಲಯಕ್ಕೆ ತಿಳಿಸಬೇಕೆಂದು ಆದೇಶವಾಗಿತ್ತು ಎಂದರೆ ಸಾಕ್ಷಿ ಏನಾದರೂ ಬದಲಾವಣೆ ಅಥವಾ ಮಾರಾಟ ಮಾಡಿದರೆ ತಿಳಿಸಬೇಕು ಎಂದು ಇತ್ತು ಎನ್ನುತ್ತಾರೆ. ನಮ್ಮ ಕೈಫಿಯತ್ತನಲ್ಲಿ ಅಂದರೆ ಪ್ರತಿವಾದಿ 10 ರಿಂದ 12 ರವರು ಸಲ್ಲಿಸಿರುವ ಕೈಪಿಯತ್ತನಲ್ಲಿ ನಾಲ್ಕು ಸೇಲ್ ಡಿಡಗಳ ಬಗ್ಗೆ ವಿವರವಾಗಿ ತಿಳಿಸಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 10 ರಿಂದ 12 ರವರು ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ನನಗೆ ಪರಿಚಯಸ್ಥರು ಎನ್ನುತ್ತಾರೆ. ಯಾವ ರೀತಿಯಿಂದ ಪರಿಚಯ ಎಂದರೆ ಸಾಕ್ಷಿ ನವಲಗುಂದ ಸಣ್ಣ ಊರಿನಲ್ಲಿ ಜೈನ ಕಮ್ಯೂನಿಟಿಯವರು ಆಗಾಗ ಗದಗ ಊರಿಗೆ ಬರುತ್ತಿದ್ದು ಹಾಗೂ ನನ್ನ ತಂದೆಯವರ ಕಾಲದಿಂದ ಪರಿಚಯ ಎಂದು ನುಡಿಯುತ್ತಾರೆ. ನಾವು ಬೇಕಂತಲೆ ಕೈಪಿಯತ್ತನಲ್ಲಾಗಲಿ, ನೋಟೀಸನಲ್ಲಾಗಲಿ ನಿಜವಾದ ವಿಷಯಗಳನ್ನು ತಿಳಿಸಿಲ್ಲ ವಾದಿಯರಿಗೆ ಮುಚ್ಚಿಟ್ಟಿರುತ್ತೇವೆ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ



ಆಸ್ತಿಯಲ್ಲಿ ಯಾವುದಾದರೂ ಬದಲಾವಣೆ ಆಗಿದ್ದನ್ನು ನ್ಯಾಯಾಲಯಕ್ಕೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಸದರಿ ಆಸ್ತಿಯಲ್ಲಿ ಯಾವುದೇ ರೀತಿಯ ಬದಲಾವಣೆ ಆಗಿಲ್ಲ ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನೀವು ದಾವಾ ಆಸ್ತಿ ಬಗ್ಗೆ ಆದಂತಹ ಬದಲಾವಣೆಗಳನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿ ನಾವು ಈ ನ್ಯಾಯಾಲಯದಲ್ಲಿ ಕೈಪಿಯತ್ತನಲ್ಲಿ ಆದಂತಹ ಎಲ್ಲ ವಿಚಾರಗಳನ್ನು ಹೇಳಿದ್ದೇವು

ಅದೇ ದಾಖಲೆ ಅಲ್ಲಿ ಹೋಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ವಿಷಯವನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆ, ನನ್ನ ಕೈಪಿಯತ್ತನಲ್ಲಿ ನಾನು ಆ ವಿಷಯಗಳನ್ನು ಹೇಳಿರುವುದಿಲ್ಲ ಅದನ್ನು ಮಾನ್ಯ ಉಚ್ಚ ನ್ಯಾಯಾಲಯ ಕೂಡಾ ಮುಚ್ಚಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ಏಪ್ರಿಲ್ 2003 ನೇ ಸಾಲಿನಲ್ಲಿ ವಾದಿಯರು ನೋಟಿಸ ಕೊಟ್ಟಾಗ ಆ ಆಸ್ತಿ ಪ್ರತಿವಾದಿ 1 ರಿಂದ 9 ರವರು ಮಾರಾಟ ಮಾಡಿದ್ದಾರೆಂಬ ವಿಷಯ ತಿಳಿದು ಬಂದಿತ್ತು ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ನಂತರ ಅವರು ಎಲ್ಲವನ್ನು ವಿಚಾರಣೆ ಮಾಡಿದಾಗ ದಿಃ23–07–2003 ರಂದು ಪ್ರತಿವಾದಿ 1 ರಿಂದ 9 ರವರು ವಂಚನೆ ಮಾಡಿದ್ದಾರೆಂದು ತಿಳಿದು ಬಂದಿತ್ತು ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಪ್ರತಿವಾದಿ ನಂಬರ 1 ರಿಂದ 9 ಹಾಗೂ ಪ್ರತಿವಾದಿ ನಂಬರ 10 ರಿಂದ 13 ಆದ ನಾವುಗಳು ವಾದಿಯರಿಂದ ಎಲ್ಲ ವಿಷಯಗಳನ್ನು ಮುಚ್ಚಿಟ್ಟು ಕ್ರಯ ಪತ್ರ ಮಾಡಿಕೊಂಡಿರುತ್ತೇವೆಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಸಾಕಷ್ಟು ಸಲ ವಾದಿಯರು ಪ್ರತಿವಾದಿಯರಿಗೆ ಸೇಲ್ ಡಿಡ್ ಮಾಡಿಕೊಡಿ ಎಂದು ಕೇಳಿದರು ಕೂಡಾ ಮತ್ತು ಮಾರಾಟದ ಬಗ್ಗೆ ಕೂಡಾ ಎನು ಹೇಳಿಲ್ಲ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ನ್ಯಾಯಾಲಯಕ್ಕೆ ಪ್ರತಿವಾದಿ ನಂಬರ 1 ರಿಂದ 9 ರವರು Register power of attorney ಆಗಿದ್ದನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ಪ್ರತಿವಾದಿಯರಿಗೆ ನಾಲ್ಕು ಸೇಲ್ ಡಿಡ್ ಆಗಿದ್ದರ ಕುರಿತು 2010 ರಲ್ಲಿ ನಾನು ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸಾಕ್ಷಿ 2004 ನೇ ಸಾಲಿನಲ್ಲಿ ಕೈಪಿಯತ್ತ ಸಲ್ಲಿಸಿದ್ದು ಸದರಿ ಕೈಪಿಯತ್ತನಲ್ಲಿ ನಾಲ್ಕು ಸೇಲ್ ಡಿಡ ಆಗಿರುವ ಕುರಿತು ಹೇಳಿದ್ದು ಅದರ ಜೊತೆ ದಾಖಲೆಗಳನ್ನು ಸಲ್ಲಿಸಿದ್ದು 2003 ರಲ್ಲಿ ವಾದಿಯರು ದಾವಾ ಸಲ್ಲಿಸಿ 2 ಸೇಲ್ ಡಿಡ ಪ್ರಶ್ನೆ ಮಾಡಿದ್ದರು. 2010 ರಲ್ಲಿ ವಾದಿಯರು ಎರಡು ಸೇಲ್ ಡಿಡ್ ನ್ನು ಪ್ರಶ್ನೆ ಮಾಡಿರುತ್ತಾರೆ ಆದರೆ ಆಸ್ತಿಗೆ ಸಂಬಂಧಪಟ್ಟಂತೆ 2000 ನೇ ಸಾಲಿನಲ್ಲಿ ನಾಲ್ಕು ಸೇಲ್ ಡಿಡ್ ರಜಿಷ್ಟರ್ ಆಗಿದ ಕಾರಣ law of estoppel ಆಗಿದ್ದರ ಪ್ರಕಾರ ನಾವು ಅರ್ಜಿ ಸಲ್ಲಿಸಿರುತ್ತೇವೆ. ಇದರ ಮೊದಲು ನಾವು ಇನ್ನು 2 ಸೇಲ್ ಡಿಡ್ ಆಗಿದ ಬಗ್ಗೆ ತಿಳಿಸಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದೇವೆ ಎನ್ನುತ್ತಾರೆ. ಆಗ್ರಿಮೆಂಟ ಆಫ ಸೇಲ್ ನ್ಯಾಯಾಲಯದಲ್ಲಿ ನಿಶಾನೆಯನ್ನಾಗಿ ಗುರ್ತಿಸಿದ ಮೇಲೆ ನಾನು ಆ ಆದೇಶದ ಮೇಲೆ

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದೆ ಎಂದರೆ ಸರಿ. ಆ ಸಮಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ದಾವೆಯನ್ನು stay ಮಾಡಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ಅಪೀಲು 2012 ರಲ್ಲಿ ಮುಕ್ತಾಯಗೊಂಡಿತ್ತು ಎಂದರೆ ಸಾಕ್ಷಿ ಸುಳ್ಳು

ಎನ್ನುತ್ತಾರೆ. ವಕೀಲರು ಮುಂದುವರೆದ  2016 ರಲ್ಲಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾಲ್ಕು ಸೇಲ್ ಡಿಡ್ ಗಳು ಯಾವ ದಿನ ಯಾರಿಗೆ ಮಾರಾಟ ಆಗಿವೆ ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಹೇಳುತ್ತೇನೆ ಎನ್ನುತ್ತಾರೆ. ಸರ್ವೆ ನಂಬರ 627 ಒಂದು ಸೇಲ್ ಡಿಡ್ ಪ್ರತಿವಾದಿ ನಂಬರ 1 ರಿಂದ 9 ರವರು ದಿಃ21-07-2000 ದಲ್ಲಿ ಪ್ರತಿವಾದಿ ನಂಬರ 10 ರಿಂದ 12 ರವರಿಗೆ ಮಾರಾಟ ಮಾಡಿದರು, ಅದೇ ಸರ್ವೆ ನಂಬರನ ಇನ್ನೊಂದು ಸೇಲ್ ಡಿಡ್ ಅದೇ ದಿನ ಪ್ರತಿವಾದಿ ನಂಬರ 13 ಅಂದರೆ ನನಗೆ  ಮಾರಾಟ ಮಾಡಿದರು. ಸರ್ವೆ ನಂಬರ 623 ಇದರಲ್ಲಿ ಒಂದು ಭಾಗದ ಸೇಲ್ ಡಿಡ್ ಪ್ರತಿವಾದಿ 10 ರಿಂದ 12 ರವರಿಗೆ ಪ್ರತಿವಾದಿ ನಂಬರ 1 ರಿಂದ 9 ರ ಪರ ಜಿಪಿಎದಾರರು ದಿಃ21-07-2000 ರಂದು ಮಾರಾಟ ಮಾಡಿದರು. ಅದೇ ಭಾಗದ ಇನ್ನೊಂದು ಆಸ್ತಿ ದಿಃ22-07-2000 ರಂದು ನನಗೆ ಪ್ರತಿವಾದಿ ನಂಬರ 1 ರಿಂದ 9 ರ ಪರ ಜಿಪಿಎದಾರರು ಮಾರಾಟ ಮಾಡಿದರು. ನಾಲ್ಕು ಸೇಲ್ ಡಿಡನ್ನು ಒಂದು ದಿನ ಬಿಟ್ಟು ಒಂದು ದಿನ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಮೂರು ಸೆಲ್ ಡೀಡ್ ಒಂದೇ ದಿನ ಮತ್ತೊಂದು ಸೇಲ್ ಡೀಡ್ ಮತ್ತೊಂದು ದಿನ ಎನ್ನುತ್ತಾರೆ. ಸದರಿ ನಾಲ್ಕು ಕ್ರಯ ಪತ್ರಗಳು ಆಗುವ ಮೊದಲು ಪಬ್ಲಿಕ್ ನೋಟೀಸ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವಾದಿಯರಿಗೆ ವಂಚನೆ ಆಗಲಿ ಎಂದು ನಾವು ಖರೀದಿ ಪತ್ರ ಮಾಡಿಕೊಳ್ಳುವ ಮೊದಲು ಯಾವುದೇ ರೀತಿಯ ಪತ್ರಿಕಾ ಪ್ರಕಟಣೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ವಾದಿಯರಿಗೆ ದಾವಾ ಆಸ್ತಿ ಮಾರಾಟವಾಗುತ್ತಿದೆ ಎಂಬ ವಿಚಾರ ತಿಳಿದು ಬರುತ್ತದೆ ಎಂಬ ಕಾರಣಕ್ಕೆ ನಾನು ಉದ್ದೇಶಪೂರ್ವಕವಾಗಿ ನೋಟಿಸ ಕೊಟ್ಟಿಲ್ಲ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. 2010 ರಲ್ಲಿ ನಾನು ಸಲ್ಲಿಸಿದ ಅರ್ಜಿಯ ಮೇಲಿನ ಆದೇಶದ ಮೇಲೆ ವಾದಿಯರು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಮಾಡಿದರು ಎಂದರೆ ಸರಿ. ನಂತರ ಈ ಪ್ರಕರಣವನ್ನು ಪುನಃ ನಡೆಸಬೇಕೆಂದು ಆದೇಶವಾಯಿತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಹಾಜರುಪಡಿಸಿರುವ ನಿಶಾನೆ ಡಿ 41 ಮತ್ತು ನಿಶಾನೆ ಡಿ 42 ಕ್ಕೆ ಸಂಬಂಧಪಟ್ಟ ಸಂಚಗಾರ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮೌಖಿಕ ಕರಾರು ಆಗಿದೆ ಎನ್ನುತ್ತಾರೆ. ನಿಶಾನೆ ಡಿ 41 ರಲ್ಲಿ ಸಂಚಗಾರ ಪತ್ರ ಆಗಿದೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿ ಬಾಂಡ ರೈಟರರವರು ತಮ್ಮ ಪದ್ದತಿ ಪ್ರಕಾರ ಬರೆದಿರುತ್ತಾರೆ ಎನ್ನುತ್ತಾರೆ ಮತ್ತು 3 ಲಕ್ಷ್ಯ 50 ಸಾವಿರ ರೂಪಾಯಿ ಮುಂಗಡ ಹಣ ಕೊಟ್ಟಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ 3 ಲಕ್ಷ್ಯ 50 ಸಾವಿರ

ಹಣವನ್ನು ಯಾವ ರೀತಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನಗದು ರೂಪದಲ್ಲಿ ಹಣ ಕೊಟ್ಟಿದ್ದೇನೆ ಎನ್ನುತ್ತಾರೆ. ನಿಶಾನೆ ಡಿ 55 ಆರಎಪಎ ನಂಬರ 162/1991 ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪೆಂಡಿಗ್ ಇದ್ದು ದಿಃ01-03-1999 ಮುಕ್ತಾಯಗೊಂಡಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅಧ್ಯಾಪಕ ನಗರ ಕೋ ಆಪರೇಟಿವ್ ಸೊಸೈಟಿ ಹಾಗೂ ಪ್ರತಿವಾದಿ 1 ರಿಂದ 9 ರವರ ನಡುವೆ ದಾವೆ ಇತ್ತು ಎಂದರೆ ಸರಿ. ಸದರಿ ಅಪೀಲು ಗೌರವಾನ್ವಿತ ಆರಎಫಎ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ತು ಎಂದು ಸಾಕ್ಷಿಗೆ ಡೈರಿ ನಂಬರ 17863/1999ರ ಜರಾಕ್ಸ ಪ್ರತಿಯನ್ನು ತೋರಿಸಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಪಿ 28 ಎಂದು ಗುರ್ತಿಸಲಾಯಿತು. ಸದರಿ ನಿಶಾನೆ ಪಿ 28 ರ ಪ್ರಕಾರ ಸದರಿ ಅಪೀಲು ದಿಃ06-01-2000 ರಂದು ಮುಕ್ತಾಯಗೊಂಡಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಸಾಕ್ಷಿ ನಿಶಾನೆ ಪಿ 28 ನ್ನು ನೋಡಿ ಇದರ ಪ್ರಕಾರ case dismiss ಆಗಿದೆ ಎಂದು ಉಲ್ಲೇಖ ಇದೆ ಎನ್ನುತ್ತಾರೆ. ಪ್ರತಿವಾದಿ ನಂಬರ 1 ರಿಂದ 9 ರವರು ಮಾನ್ಯ ರಟ್ಟಿಹಳ್ಳಿ ವಕೀಲರಿಗೆ ರಜಿಷ್ಟರ್ ಪವರ್ ಆಫ ಅರ್ಟನಿ ಯಾವಾಗ ಮಾಡಿಕೊಟ್ಟರು ಎಂದು ಮಾಹಿತಿ ಇದೇಯಾ ಎಂದರೆ ಸಾಕ್ಷಿ ಆಸ್ತಿ ವ್ಯವಹಾರ ಮಾಡುವ ಸಮಯದಲ್ಲಿ ಜಿಪಿಎ ಇದೆ ಎಂಬುವುದು ಗೊತ್ತಾಯಿತು ಸದರಿ ಜಿಪಿಎ 1997 ರಲ್ಲಿ ನೊಂದಣಿಯಾಗಿದೆ ಎಂಬುವುದು ತಿಳಿದು ಬಂತು. ಸದರಿ ಜಿಪಿಎ ಮಾಡುವ ಸಮಯದಲ್ಲಿ ಆರಎಪಎ ನಂಬರ 162/1991 ರಲ್ಲಿ ಯಾವುದೇ ರೀತಿಯ ವ್ಯವಹಾರಗಳನ್ನು ಆಸ್ತಿಗೆ ಸಂಬಂಧಿಸಿದಂತೆ ಮಾಡಬಾರದು ಎಂದು ಆದೇಶ ಇತ್ತು ಎಂದರೆ ಸಾಕ್ಷಿ ಆಸ್ತಿಯನ್ನು ಮಾರಾಟ ಮಾಡಬಾರದು ಎಂಬ ತಡಯಾಜ್ಞೆ ಇತ್ತು ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ಈಗ ನಾನು ಹೇಳಿದ ಜಿಪಿಎ ಮಾಡುವಕ್ಕಿಂತ ಮೊದಲು ವಾದಿಯರಿಗೆ ಜಿಪಿಎ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. 1997 ರ ಸಾಲಿನಲ್ಲಿ ಪ್ರತಿವಾದಿ ನಂಬರ 1 ರಿಂದ 9 ರವರು ವಾದಿಯರ ಪರವಾಗಿ ಮಾಡಿಕೊಟ್ಟಂತಹ ಎರಡು irrevocable ಪಾವರ ಆಫ ಅರ್ಟನಿಗಳನ್ನು 1997 ರಲ್ಲಿ ರಟ್ಟಿಹಳ್ಳಿ ವಕೀಲರ ಜಿಪಿಎ ಮಾಡಿಕೊಡುವ ಸಂದರ್ಭದಲ್ಲಿ ರದ್ದು ಮಾಡಿಲ್ಲವೆಂದರೆ ಸಾಕ್ಷಿ ಎರಡು ಜಿಪಿಎಗಳು ಸುಳ್ಳು ಇರುವ ಕಾರಣ ಅವುಗಳನ್ನು ರದ್ದು ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಹಾಕಿದ ನಂತರ ವಾದಿಯರಿಗೆ ಈ ವಿಷಯ ತಿಳಿಸಿದ್ದು ನಾವಾಗಲಿ, ಪ್ರತಿವಾದಿಯರಾಗಲಿ ಅವರಿಗೆ ಈ ವಿಷಯ ತಿಳಿಸಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ 1 ರಿಂದ 9 ರವರ ಉತ್ತರವನ್ನು ನಾನು ಕೊಡಲು ಆಗುವುದಿಲ್ಲ, ನಾವು ಆಸ್ತಿಗೆ ಎಂಟ್ರ ಆಗಿದ್ದು 2000 ರಲ್ಲಿ ಅದಕ್ಕಿಂತ ಮೊದಲಿನ ವಿಚಾರಗಳು ನಮಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ10-02-2023 ರಲ್ಲಿ ನಾವು ಸಲ್ಲಿಸಿರುವ additional written statement ನಲ್ಲಿ ಆಸ್ತಿ ಕುರಿತು ಎನು ಎನು ಆಗಿದೆ

ಎಂಬ ವಿಚಾರವನ್ನು ತಿಳಿಸಿರುತ್ತೇವೆ ಅದಕ್ಕಿಂತ ಮೊದಲು ನಾವು ತಿಳಿಸಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ವಸ್ತು ಸ್ಥಿತಿಯನ್ನು ನಾನು ಅಡಿಷನಲ್ written statement ನಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ದಾವಾ ಸಲ್ಲಿಸುವಾಗ ಇದ್ದ ಸ್ಥಿತಿ ಈಗಲೂ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅದರಲ್ಲಿ ಸರ್ವೆ ನಂಬರ 623 ಈ ಆಸ್ತಿ ಮಾತ್ರ air port authority ಅವರಿಗೆ acquire ಆಗಿರುತ್ತದೆ ಎನ್ನುತ್ತಾರೆ. ದಿಃ16-09-2025 ರಲ್ಲಿ ನಾನು ಒಂದು ಮಧ್ಯಂತರ ಅರ್ಜಿಯನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಹೌದು ಎನ್ನುತ್ತಾರೆ. ಸದರಿ ಮಧ್ಯಂತರ ಅರ್ಜಿ ಸಂಖ್ಯೆ 27 ರ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರ್ತಿಸಿದ್ದರಿಂದ ಸದರಿ ದಾಖಲೆಯನ್ನು ನಿಶಾನೆ ಪಿ 29 ಎಂದು ಗುರ್ತಿಸಲಾಯಿತು. ಸದರಿ ಅರ್ಜಿಯಲ್ಲಿ ನಾನು ವಾಟ್ನಿ ಮಾಡಿದ ಕುರಿತು ಬರೆಸಿರುತ್ತೇನೆಂದರೆ ಸರಿ. ಸರ್ವೋಚ್ಚ ನ್ಯಾಯಾಲಯದಲ್ಲಿ ಆದೇಶವಾದ ನಂತರ ವಾದಿಯರಿಗೆ ಗೊತ್ತಾಗಲಾರದ ಹಾಗೆ ನಾವು ಗಡಿಬಿಡಿಯಲ್ಲಿ ಕ್ರಯ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಸಾಮಾನ್ಯ ಪ್ರಕ್ರಿಯೇಯಲ್ಲಿ ಕ್ರಯ ಪತ್ರ ಮಾಡಿಕೊಂಡಿದ್ದು ಆ ಕಾರಣಕ್ಕೆ ವಾದಿಯರಿಗೂ ನಮಗೂ ನೇರ ಸಂಬಂಧ ಬರುವುದಿಲ್ಲ ಎನ್ನುತ್ತಾರೆ. ಎರಡು ಆಗ್ರಿಮೆಂಟ ಆಫ ಸೇಲ್ ಹಾಗೂ irrevocable power of attorney ಇವುಗಳನ್ನು ರದ್ದು ಪಡಿಸದೆ ನಮಗೆ ಕ್ರಯ ಪತ್ರ ಮಾಡಿಕೊಟ್ಟಿರುವುದು ಕಾನೂನು ಬಾಹಿರ ಎಂದರೆ ಸಾಕ್ಷಿ valid power of attorney ಹಾಗೂ valid sale of agreement ಇದ್ದರೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಈ ಆಸ್ತಿ ಕುರಿತು ನಾವು ಏನೇನು ಬದಲಾವಣೆ ಮಾಡಿರುತ್ತೇವೆ ದಾವಾ ಇದ್ದಾಗ ಎಂಬುವುದನ್ನು ನ್ಯಾಯಾಲಯದ ಗಮನಕ್ಕೆ ತಂದಿಲ್ಲ ಎಂದರೆ ಸಾಕ್ಷಿ ದಾವಾ ಪೂರ್ವದಲ್ಲಿ ಇದ್ದ ಸ್ಥಿತಿ ಈಗಲೂ ಇದೇ ಒಂದು ಆಸ್ತಿ ಮಾತ್ರ air port authority ಗೆ acquire ಆಗಿದೆ ಎನ್ನುತ್ತಾರೆ. ನನ್ನ ಮನೆಯವರು ಮೀಸಲೇನಿಯಸ ನಂಬರ 44/2022 ರಲ್ಲಿ ಬಂದು ನ್ಯಾಯಾಲಯಕ್ಕೆ ಸಾಕ್ಷಿ ನುಡಿದಿದ್ದು ಈ ಕೇಸನಲ್ಲಿ ಬಂದು ಅವರಿಗೆ ಸಾಕ್ಷಿ ನುಡಿಯಲು ಅನುಕೂಲ ಇದೆ ಎಂದರೆ ಸಾಕ್ಷಿ ಸದರಿ ಮಿಸಲೇನಿಯಸ ಕೇಸ ಕ್ರಿಮೀನಲ್ ಸ್ವರೂಪದು ಇರುವ ಕಾರಣ ಆ ಕೇಸನಲ್ಲಿ ನನ್ನ ಜಿಪಿಎ ಇಲ್ಲದೆ ಅವರು ನ್ಯಾಯಾಲಯಕ್ಕೆ ಬರಬೇಕಾಯಿತು ಎಂದು ನುಡಿಯುತ್ತಾರೆ. ನಾಲ್ಕು ಸೇಲ್ ಡಿಡಗಳು ಎಷ್ಟು ಕ್ರಯದ ಹಣಕ್ಕೆ ಆಗಿವೆ ಎಂದರೆ ಸಾಕ್ಷಿ ನಮ್ಮಗೆ ಸೇರಿದ ಎರಡು ಕ್ರಯ ಪತ್ರಗಳು ಒಂದು 4 ಲಕ್ಷ 5 ಸಾವಿರ ಮತ್ತೊಂದು 2 ಲಕ್ಷ ಹಣಕ್ಕೆ ಆಗಿದೆ. ಪ್ರತಿವಾದಿ 1 ರಿಂದ 9 ರವರು ನ್ಯಾಯಾಲಯಕ್ಕೆ ಬಂದು ನಾವು ಯಾವುದೇ power of attorney ಕೊಟ್ಟಿಲ್ಲ ಹಾಗೂ ಸೇಲ್ ಕುಡಾ ಮಾಡಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಹಾಗಿದ್ದರೆ ಅದು ಸುಳ್ಳು ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ಯಾವುದೇ ಕ್ರಯ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ

ಸಾಕ್ಷಿ ಅವರ ಪರವಾಗಿ registrar GPA holder ಸಹಿ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ವಾದಿಯರ ಪರವಾಗಿ ಮಾಡಿರುವ ರಜಿಷ್ಟರ ಸೇಲ್ ಆಗ್ರಿಮೆಂಟಗಳನ್ನು ರದ್ದು ಮಾಡಲಾರದೆ ಮಾರಾಟ ಮಾಡಲು ಅವರಿಗೆ ಹಕ್ಕು ಇಲ್ಲ ಎಂದರೆ ಸಾಕ್ಷಿ ಸೇಲ್ ಆಗ್ರಿಮೆಂಟ ಸುಳ್ಳು ಇದ್ದರೆ ಅವುಗಳನ್ನು ರದ್ದು ಪಡಿಸುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ನಾನು ಹಾಗೂ ಪ್ರತಿವಾದಿ 1 ರಿಂದ 12 ರವರು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯ ಪತ್ರಗಳನ್ನು ಮಾಡಿಕೊಂಡಿರುತ್ತೇವೆಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ.  ನಾವು ವಾದಿಯರಿಗೆ ಮೋಸ ಮಾಡುವ ದೃಷ್ಟಿಯಿಂದ ಎಲ್ಲ ವಿಚಾರಗಳನ್ನು ಮುಚ್ಚಿಟ್ಟು ಸೇಲ್ ಡಿಡ್  ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು ಎನ್ನುತ್ತಾರೆ. ಕೆಲವೊಂದು ಸತ್ಯ ವಿಷಯಗಳು ನನ್ನ ಹೆಂಡತಿಗೆ ಗೊತ್ತಿದ್ದು ಅವುಗಳು ಹೊರ ಬರುತ್ತವೆ ಎಂಬ ಕಾರಣಕ್ಕೆ ಅವರು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ